ಶ್ರಿ ಕೆ.ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು):

ಅ) ಹವಾಮಾನ ವೈಪರೀತ್ಯದಿಂದಾಗಿ ಸೆಪ್ಟೆಂಬರ್ 98 ಅಕ್ಟೋಬರ್ 98 ತಿಂಗಳುಗಳಲ್ಲಿ ಸುಮಾರು 20 ದಿನಗಳ ಕಾಲ ಮೀನುಗಾರಿಕೆ ಸ್ಥಗಿತಗೊಂಡಿರುವುದರಿಂದ ಈ ಅವಧಿಯಲ್ಲಿ ಮೀನಿನ ಹಿಡುವಳಿ ಕಡಿಮೆಯಾಗಿದೆ.

ಆ) ವಿದೇಶಿ ಹಡಗುಗಳು ಕರ್ನಾಟಕ ಕರಾವಳಿಯ ಸಮುದ್ರ ತೀರದಲ್ಲಿ ರಾಜ್ಯದ ಸೀಮಿತ ಪ್ರದೇಶದಲ್ಲಿ (ಸಮುದ್ರ ತೀರದಿಂದ 24 ನಾಟಿಕಲ್ ಮೈಲಿ ಒಳಗೆ) ಆಳ ಸಮುದ್ರ ಮೀನುಗಾರಿಕೆ ಮಾಡುತ್ತಿಲ್ಲವೆಂದು ಕೇಂದ್ರದ ಕರಾವಳಿ ರಕ್ಷಣಾ ಪಡೆಯವರಿಂದ ವರದಿಯಾಗಿದೆ.

ಇ) 1985-86 ರಿಂದ ಯಾಂತ್ರೀಕೃತ ದೋಣಿಗಳು ಬಳಸುವ ಡೀಸಲ್ ಮೇಲಿನ ರಾಜ್ಯ ಮಾರಾಟ ಕರಕ್ಕೆ ಸಹಾಯಧನ ನೀಡುವ ಯೋಜನೆ ಪ್ರಾರಂಭವಾಗಿದ್ದು, 1985-86ರಲ್ಲಿ ಡೀಸಲ್ ದರ 1 ಲೀಟರ್‌ಗೆ 3.10 ರೂ.ಗಳು ಆಗಿತ್ತು. ಆಗ (1985-86) ಮೀನುಗಾರರಿಗೆ ಪ್ರತಿ ಲೀಟರ್ ಡೀಸಲ್‌ಗೆ ರಾಜ್ಯ ಮಾರಾಟ ಕರದಲ್ಲಿ 52 ಪೈಸೆ ಸಹಾಯಧನ ನೀಡಲಾಗುತ್ತಿತ್ತು. ಈಗಲೂ ಅದೇ ದರದಲ್ಲಿ ನೀಡಲಾಗುತ್ತಿದೆ. ಡೀಸೆಲ್ ಮೇಲಿನ ರಾಜ್ಯ ಮಾರಾಟ ಕರದಲ್ಲಿ ಸಹಾಯ ಧನವನ್ನು ಹೆಚ್ಚಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ತನಿಖೆಗಾಗಿ ದಾಖಲಾಗಿರುವ ಪ್ರಕರಣಗಳ ಸಂಖ್ಯೆ.

2914:(3881)

ಶ್ರೀ.ಯು.ಆರ್.ಸಭಾಪತಿ (ಉಡುಪಿ) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಉಚ್ಚ ನ್ಯಾಯಾಲಯದಲ್ಲಿ 1991 ರಿಂದ 1998 ಅಕ್ಟೋಬರ್ 15 ರವರೆಗೆ ತನಿಖೆಗಾಗಿ ದಾಖಲಾಗಿರುವ ಒಟ್ಟು ದಾವೆಗಳ ಪ್ರಕರಣ ಸಂಖ್ಯೆ ಎಷ್ಟು? (ವರ್ಷವಾರು ಮಾಹಿತಿ ನೀಡುವುದು.)

ಆ) ಇದರಲ್ಲಿ ಇತ್ಯರ್ಥವಾದ ದಾವೆಗಳ ಸಂಖ್ಯೆ ಎಷ್ಟು?

ಇ) 1991 ರಿಂದ ಈವರೆಗೆ ವಿಲೇವಾರಿಗಾಗಿ ಬಾಕಿ ಇರುವ ಮೊಕದ್ದಮೆಗಳ ಸಂಖ್ಯೆ

ಎಷ್ಟು?

ಈ) ಇಷ್ಟೊಂದು ಮೊಕದ್ದಮೆಗಳು ಬಾಕಿ ಇರಲು ಕಾರಣಗಳೇನು?

ಶ್ರೀ ಎಂ.ಸಿ.ನಾಣಯ್ಯ (ಕಾನೂನು, ಸಂಸದೀಯ ವ್ಯವಹಾರಗಳು ಶಾಸನ ರಚನೆ ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು):

ಅ) ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ 1994ರಿಂದ ಸೆಪ್ಟೆಂಬರ್ 98ರವರೆಗೆ ಕೆಳಕಂಡಂತೆ ಪ್ರಕರಣಗಳು ದಾಖಲಾಗಿವೆ.

| ವರ್ಷ | ಪ್ರಕರಣಗಳ ಸಂಖ್ಯೆ |
|---|---|
| 1991 | 64,281 |
| 1992 | 60,453 |
| 1993 | 63,686 |
| 1994 | 63,481 |
| 1995 | 72,434 |
| 1996 | 70,780 |
| 1997 | 69,780 |
| 1998 | 56,821 |

(ಸೆಪ್ಟೆಂಬರ್ 96ವರೆಗೆ)

ಆ) 1991 ರಿಂದ ಸೆಪ್ಟೆಂಬರ್ 1998ರವರೆಗೆ ಇತ್ಯರ್ಥವಾದ ಪ್ರಕರಣಗಳ ವಿವರ ಈ ಕೆಳಕಂಡಂತಿದೆ.

| | |
|---|---|
| 1991 | 53,074 |
| 1992 | 44,350 |
| 1993 | 39,573 |
| 1994 | 51,893 |

| | |
|---|---|
| 1995 | 62,507 |
| 1996 | 81,709 |
| 1997 | 84,857 |
| 1998 | 5,045 |

(ಸೆಪ್ಟೆಂಬರ್ 98ರವರೆಗೆ)

ಇ) ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ 1991ರಿಂದ ಸೆಪ್ಟೆಂಬರ್ 97ರವರೆಗೆ 90,316 ಕ್ರಿಮಿನಲ್ ಹಾಗೂ ಸಿವಿಲ್ ಪ್ರಕರಣಗಳು) ಪ್ರಕರಣಗಳು ಬಾಕಿ ಇರುತ್ತಿವೆ.

ಈ) ಈ ಪ್ರಶ್ನೆಯು ಉಚ್ಚ ನಾಯ್ಯಾಲಯದ ಪರಿಧಿಯಲ್ಲಿ ಬರುವುದರಿಂದ ರಾಜ್ಯ ಸರ್ಕಾರ ಕಾರಣಗಳನ್ನು ನೀಡಲು ಸಾಧ್ಯವಿರುವುದಿಲ್ಲ.

ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಸಂಗ್ರಹಿಸಲ್ಪಟ್ಟ ಮೊಬಲಗು.

2917:(3884)

ಶ್ರೀ.ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1996-97 ಮತ್ತು 1997-98ರ ಸಾಲಿನಲ್ಲಿ ಸಂಗ್ರಹಿಸಲ್ಪಟ್ಟ ವಾಣಿಜ್ಯ ತೆರಿಗೆ ಮೊಬಲಗು ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) 1996-97 ಮತ್ತು 1997-98ರ ಸಾಲಿನಲ್ಲಿ ತೆರಿಗೆ ವಸೂಲಿಯಾಗದೆ ಬಾಕಿಯಿರುವ ಪ್ರಕರಣಗಳೆಷ್ಟು: (ಜಿಲ್ಲಾವಾರು ಮಾಹಿತಿ ನೀಡುವುದು)

ಇ) ತೆರಿಗೆ ವಸೂಲಿಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯ ಮಂತ್ರಿಗಳು):